ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸೆಷನ್ಸ್ ಕೇಸ್ ನಂಬ್ರ 5/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ವಸಂತಿ ಶೆಟ್ಟಿ | ಫ್ರಾ.ಸಾಃ 1 |
| ಗಂಡನ ಹೆಸರು | : | ಸದಾಶಿವ ಶೆಟ್ಟಿ | ಚಾ.ಸಾಃ 1 |
| ಪ್ರಾಯ | : | 77 ವರ್ಷ | **ದಿನಾಂಕಃ 12.06.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ಶ್ರೀನಿಧಿ ಮನೆ, ಕೊಲ್ನಾಡು, ಮುಲ್ಕಿ ತಾಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಚಾ.ಸಾ.7 ನನ್ನ ಗಂಡ. ಮೇಲ್ಕಾಣಿಸಿದ ವಿಳಾಸದಲ್ಲಿ ನಾನು ಕಳೆದ 28 ವರ್ಷಗಳಿಂದ ವಾಸ ಮಾಡಿಕೊಂಡಿದ್ದೇನೆ. ನನಗೆ 5 ಜನ ಮಕ್ಕಳು, ಅವರಲ್ಲಿ 4 ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಇರುತ್ತಾರೆ. ನನ್ನ ಮಗಳು ಮದುವೆಯಾಗಿ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದಾಳೆ. ಗಂಡು ಮಕ್ಕಳ ಪೈಕಿ ಇಬ್ಬರು ವಿದೇಶದಲ್ಲಿ, ಒಬ್ಬ ಬೆಂಗಳೂರಿನಲ್ಲಿ ಇದ್ದು, ಒಬ್ಬ ಮಗ ಶಶಿಕಾಂತ್ ನಮ್ಮ ಜೊತೆ ವಾಸ ಮಾಡಿಕೊಂಡಿದ್ದಾನೆ.

2. ನನ್ನ ಮಗ ಶಶಿಕಾಂತ್ ಕಂಟ್ರಾಕ್ಟರ್ ಜೊತೆ ಸೂಪರ್ ವೈಸರ್ ಆಗಿ ಪಡುಬಿದ್ರಿಯ ನಾಗಾರ್ಜುನ ಕಾಂಟ್ರಾಕ್ಟ್ ನಲ್ಲಿ ಕೆಲಸ ಮಾಡಿಕೊಂಡಿದ್ದಾನೆ. ದಿನಾಂಕಃ 17.09.2023 ರಂದು ನಾನು ಮತ್ತು ನನ್ನ ಗಂಡ ನನಗೆ ಜ್ವರ ಬರುತ್ತಿದ್ದರಿಂದ ಔಷಧಿಗಾಗಿ ಹಳೆಯಂಗಡಿ ಎಂಬಲ್ಲಿಗೆ ಹೋಗಿದ್ದೆವು. ನಾನು ಔಷಧಿ ತೆಗೆದುಕೊಂಡು ರಿಕ್ಷಾದಲ್ಲಿ ಮನೆಗೆ ಬಂದೆ. ನನ್ನ ಗಂಡ ಯಾವುದೋ ಕೆಲಸದ ಮೇಲೆ ಅಲ್ಲೇ ಉಳಿದರು. ನಾನು ರಿಕ್ಷಾದಿಂದ ಮನೆಯ ಹಿಂದೆ ಇಳಿಯುತ್ತಿರುವಾಗ ದಾರಿ ಮಧ್ಯೆ ಒಂದು ಬೈಕ್ ಇತ್ತು, ಅದರಲ್ಲಿ ಒಬ್ಬ

ನಿಂತುಕೊಂಡಿದ್ದ, ಇನ್ನೊಬ್ಬ ಬೈಕನ್ನು ತುಳಿಯುತ್ತಿದ್ದ. ನಾನು ಮನೆಗೆ ಹೋಗಿ ಬೀಗ ತೆಗೆಯುವಾಗ ಒಬ್ಬ ಓಡಿ ನನ್ನ ಮನೆಯಂಗಳಕ್ಕೆ ಬಂದು, ನಮ್ಮ ಬೈಕ್ ಬಂದ್ ಬಿದ್ದಿದೆ, ಪೆಟ್ರೋಲ್ ತರಲು ಒಂದು ಬಾಟಲಿ ಕೊಡಿ ಎಂದು ಹೇಳಿದನು. ನಾನು ನನ್ನ ಮನೆಯ ಬೀಗ ತೆರೆದು ಒಳಗೆ ಹೋಗಿ ಒಂದು ಬಾಟಲಿಯನ್ನು ತಂದು ಕೊಟ್ಟೆ. ಆ ವ್ಯಕ್ತಿ ಬಾಟಲಿ ತೆಗೆದುಕೊಂಡು ಥ್ಯಾಂಕ್ಸ್ ಹೇಳಿ ಹೋದ. ನಾನು ಮನೆಯ ಬಾಗಿಲು ಲಾಕ್ ಮಾಡಿ, ಒಳಗೆ ಹೋಗಿ ಔಷಧಿ ತೆಗೆದುಕೊಂಡು ವಿಶ್ರಾಂತಿ ಪಡೆಯಲು ಆಲೋಚಿಸುವಾಗ, ಮತ್ತೆ ಒಬ್ಬ ವ್ಯಕ್ತಿ ಹೊರಗಿನಿಂದ "ಅಮ್ಮಾ, ಬಾಟಲಿ ದೊಡ್ಡದಾಯಿತು, ಚಿಕ್ಕ ಬಾಟಲಿ ಕೊಡಿ" ಎಂದು ಕೇಳಿರುತ್ತಾನೆ. ಅದಕ್ಕೆ ನಾನು ಸಣ್ಣ ಬಾಟಲಿಯನ್ನು ತೆಗೆದುಕೊಂಡು ಹೋಗಿ ಬಾಗಿಲ ಚಿಲಕ ತೆರೆದು ಹೊರಗಡೆ ಸಿಟೌಟ್ ಗೆ ಕಾಲಿಟ್ಟಾಗ, ಸಿಟೌಟ್ ನಲ್ಲಿ ಇಬ್ಬರು ಮತ್ತು ಮನೆಯ ಹೊರಗಡೆ ಇಬ್ಬರು ಇದ್ದರು.

3. ಒಬ್ಬ ವ್ಯಕ್ತಿ ನನ್ನ ಕುತ್ತಿಗೆಗೆ ಚೂರಿಯನ್ನು ಹಿಡಿದಿದ್ದು, ಆಗ ಇನ್ನೊಬ್ಬ ವ್ಯಕ್ತಿ ನನ್ನ ಕರಿಮಣಿ ಸರವನ್ನು ಎಳೆಯುವಾಗ ನಾನು ಕರಿಮಣಿ ಸರವನ್ನು ಹಿಡಿದುಕೊಂಡೆ, ಆಗ ನಾನು ಹಿಡಿದ ಭಾಗ ನನ್ನ ಕೈಯಲ್ಲೇ ಉಳಿಯಿತು ಮತ್ತು ಇನ್ನೊಂದು ಭಾಗ ಆ ವ್ಯಕ್ತಿ ಕೈಗೆ ಹೋಯಿತು. ನಂತರ ಆ ವ್ಯಕ್ತಿಗಳು ಅಲ್ಲಿಂದ ಓಡಿ ಹೋಗಿರುತ್ತಾರೆ. ನಾನು ನನಗಾದಷ್ಟು ಅವರ ಹಿಂದೆ ಹೋದೆ ಮತ್ತು ಬೊಬ್ಬೆ ಹಾಕಿರುತ್ತೇನೆ. ನನ್ನ ಬೊಬ್ಬೆ ಕೇಳಿ ನನ್ನ ಗಂಡ ಸಂಬಂಧಿಕರು ಸ್ಥಳಕ್ಕೆ ಬಂದಿರುತ್ತಾರೆ ಮತ್ತು ಮುಲ್ಕಿ ಪೊಲೀಸರಿಗೆ ವಿಷಯ ತಿಳಿಸಿರುತ್ತಾರೆ. ಸದರಿ ಘಟನೆ ಮಧ್ಯಾಹ್ನ 12.30 ರಿಂದ 1.00 ಗಂಟೆಯ ಮಧ್ಯದಲ್ಲಿ ನಡೆದಿರುತ್ತದೆ.

4. ನಂತರ ಕೂಡಲೇ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ ಮತ್ತು ನಾನು ಘಟನೆಯ ಬಗ್ಗೆ ಅವರಿಗೆ ಹೇಳಿರುತ್ತೇನೆ. ಪೊಲೀಸರು ಬರೆದದ್ದಕ್ಕೆ ನಾನು ಸಹಿ ಹಾಕಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಹೇಳಿಕೆ ದೂರು ಆಗಿದ್ದು, ಸಾಕ್ಷಿ ಅದರಲ್ಲಿ

ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು **ನಿ.ಪಿ.1** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

5. ನಂತರ ಪೊಲೀಸರು ಅಲ್ಲಿ ಬರವಣಿಗೆ ಮಾಡಿ ನಕಾಶೆಯನ್ನು ಕೂಡ ತಯಾರಿಸಿರುತ್ತಾರೆ, ಅದಕ್ಕೆ ನಾನು ಮತ್ತು ಬೇರೆಯವರು ಕೂಡ ಸಹಿ ಹಾಕಿರುತ್ತೇವೆ. ಸದರಿ ಮಹಜರು ಮತ್ತು ನಕಾಶೆಯಲ್ಲಿ ಸಾಕ್ಷಿ ತನ್ನ ಸಹಿಗಳನ್ನು ಗುರುತಿಸಿದ ಮೇರೆಗೆ, ಮಹಜರನ್ನು ನಿ.ಪಿ.2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಕಾಶೆಯನ್ನು ನಿ.ಪಿ.3 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ನನ್ನ ಕರಿಮಣಿ ಸರ ಒಟ್ಟು 5 ಪವನ್ ತೂಕ ಇತ್ತು. ಪೊಲೀಸರು ಮಹಜರು ವೇಳೆ ನನ್ನ ಕೈಯಲ್ಲಿ ಉಳಿದುಕೊಂಡಿದ್ದ ಕರಿಮಣಿ ಸರದ ತುಂಡನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ.

6. ಸುಮಾರು ಒಂದು ತಿಂಗಳ ಬಳಿಕ ನಾನು ಮುಲ್ಕಿ ಪೊಲೀಸು ಠಾಣೆಗೆ ಹೋಗಿ ನನ್ನ ಕರಿಮಣಿ ಸರವನ್ನು ಗುರುತಿಸಿರುತ್ತೇನೆ ಮತ್ತು ನಂತರ ನ್ಯಾಯಾಲಯದಿಂದ ಕರಿಮಣಿ ಸರದ ಎರಡು ತುಂಡನ್ನು ಮರಳಿ ಪಡೆದಿರುತ್ತೇನೆ.

7. ನಂತರ ಸಬ್ ಜೈಲಿನಲ್ಲಿ ನನ್ನನ್ನು ಆರೋಪಿಗಳನ್ನು ಗುರುತಿಸಲು ಪೊಲೀಸರು ನೋಟೀಸು ನೀಡಿರುತ್ತಾರೆ. ಸದರಿ ಸಬ್ ಜೈಲಿನಲ್ಲಿ ಗುಂಪಾಗಿ ನಿಲ್ಲಿಸಿದ ವ್ಯಕ್ತಿಗಳನ್ನು ನನಗೆ ಗುರುತಿಸಲು ಆಗಿರುವುದಿಲ್ಲ.

8. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿ ಹತ್ತಿರ ಹೋಗಿ 1 ನೇ ಆರೋಪಿಯಾದ ರಘುರವರನ್ನು ನೋಡಿ ಸದರಿ ವ್ಯಕ್ತಿ ನನಗೆ ಆ ದಿನ ಬಾಟಲಿ ಕೇಳಿದ ವ್ಯಕ್ತಿ ಎಂದು ಗುರುತಿಸುತ್ತಾರೆ. 2 ನೇ ಆರೋಪಿಯಾದ ಪ್ರಮೋದನ್ನು ನೋಡಿ ಸಾಕ್ಷಿ, ಸದರಿ ವ್ಯಕ್ತಿ ನನಗೆ ಆ ದಿನ ಚೂರಿ ತೋರಿಸಿದ ವ್ಯಕ್ತಿ ಎಂದು ಗುರುತಿಸುತ್ತಾರೆ. 5 ನೇ ಆರೋಪಿಯಾದ ಮಂಜುನಾಥನನ್ನು ನೋಡಿ ಸಾಕ್ಷಿ, ಸದರಿ ವ್ಯಕ್ತಿ ಆ ದಿನ ನನ್ನ ಮಾಂಗಲ್ಯ ಸರ ಕಿತ್ತುಕೊಂಡ ವ್ಯಕ್ತಿ ಎಂದು ಗುರುತಿಸುತ್ತಾರೆ. ಉಳಿದ ವ್ಯಕ್ತಿಗಳನ್ನು ಸಾಕ್ಷಿ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

9. ಸಬ್ ಜೈಲಿನಲ್ಲಿ ಆರೋಪಿಗಳ ಗುರುತು ಹಚ್ಚುವ ಕವಾಯತು ಕಾಲಕ್ಕೆ ಗುಂಪು ಗುಂಪಾಗಿ ನಿಲ್ಲಿಸಿದ ವ್ಯಕ್ತಿಗಳನ್ನು ನೋಡಿದಾಗ ತಯಾಗಿಸಿದ ದಾಖಲೆಗೆ ನಾನು ಸಹಿ ಹಾಕಿರುತ್ತೇನೆ. ಸದರಿ ದಾಖಲೆಗಳನ್ನು ನಿ.ಪಿ.4, ನಿ.ಪಿ.5 ಮತ್ತು ನಿ.ಪಿ.6 ಎಂದು ಗುರುತಿಸಲಾಯಿತು ಮತ್ತು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.4(ಎ), ನಿ.ಪಿ.5(ಎ) ಮತ್ತು ನಿ.ಪಿ.6(ಎ) ಎಂದು ಗುರುತಿಸಲಾಯಿತು.

10. ಪೊಲೀಸರು ಮಹಜರು ಕಾಲಕ್ಕೆ ತೆಗೆದ ಫೋಟೋವನ್ನು ನೋಡಿ ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಫೋಟೋವನ್ನು **ನಿ.ಪಿ.7** ಎಂದು ಗುರುತಿಸಲಾಯಿತು. ಘಟನೆ ಕಾಲಕ್ಕೆ ತುಂಡಾದ ಕರಿಮಣಿ ಸರದ ಫೋಟೋವನ್ನು ನಿ.ಪಿ.8 ಎಂದು ಮತ್ತು ಸುಲಿಗೆಯಾದ ಕರಿಮಣಿ ತುಂಡಾದ ಸರದ ಫೋಟೋವನ್ನು ನಿ.ಪಿ.9 ಎಂದು ಹಾಗೂ ಅದನ್ನು ಮರಳಿ ಪಡೆದ ಬಗ್ಗೆ ತೆಗೆದ ಎರಡು ಫೋಟೋಗಳನ್ನು ನಿ.ಪಿ.10(2) ಎಂದು ಗುರುತಿಸಲಾಯಿತು. ಅದೇ ಸಮಯ ಮಹಜರು ಬರೆದಿದ್ದು, ಸದರಿ ಮಹಜರನ್ನು ನಿ.ಪಿ.11 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು

ಗುರುತಿಸಲಾಯಿತು ಮತ್ತು ಅದಕ್ಕೆ ಸಂಬಂಧಿಸಿದ ರಶೀದಿಯನ್ನು ಈಗ ನೋಡುತ್ತಿದ್ದು, ಸದರಿ ರಶೀದಿಯನ್ನು ನಿ.ಪಿ.12 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು.

11. ಸದರಿ ವ್ಯಕ್ತಿಗಳು ನನ್ನ ಕರಿಮಣಿ ಎಳೆಯುವಾಗ ನನ್ನ ಎಡಕಿವಿಯ ಬಳಿ ಗಾಯ ಆಯಿತು. ನಂತರ ಪೊಲೀಸರು ನನ್ನನ್ನು ಮುಲ್ಕಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ಈ ದಿನ ಸಾಕ್ಷಿ ತಾನು ಮರಳಿ ಪಡೆದ ಎರಡು ತುಂಡು ಕರಿಮಣಿ ಸರವನ್ನು ತಂದಿದ್ದು, ಅದನ್ನು ಅಕ್ಕಸಾಲಿಗರ ಬಳಿ ಸರಿಪಡಿಸಿಕೊಂಡಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು ಮತ್ತು ಸದರಿ ಕರಿಮಣಿ ಸರ ಆಕೆ ಪ್ರತಿದಿನ ಧರಿಸುವ ಆಭರಣ ಆದ ಕಾರಣ ಅದನ್ನು ಮರಳಿ ಸಾಕ್ಷಿಗೆ ಹಿಂತಿರುಗಿಸಲಾಯಿತು. ನನಗೆ ಆ ದಿನ ತೋರಿಸಿದ ಚೂರಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**<u>ಪಾಟೀ ಸವಾಲುಃ 1, 2 ಮತ್ತು 6ನೇ ಆರೋಪಿತರ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಶ್ರೀ ಜಿ.ವಿ.ಜಿ. ವಕೀಲರಿಂದಃ</u>**

12. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಗಂಡ ವಾಸ ಮಾಡಿಕೊಂಡಿರುತ್ತೇವೆ. ನನ್ನ ಮಗ ಶಶಿಕಾಂತ್ ಬಂದು ಹೋಗಿ ಮಾಡುತ್ತಿರುತ್ತಾನೆ. ನಮ್ಮ ಮನೆ ಕೆಲಸಕ್ಕೆ ಯಾರೂ ಕೆಲಸದವರನ್ನು ನಾನು ನೇಮಿಸಿಲ್ಲ. ನಮ್ಮ ಮನೆ 25 ಸೆಂಟ್ಸ್ ಜಾಗದಲ್ಲಿ ಇದೆ ಮತ್ತು ಅಲ್ಲಿ ತೆಂಗು ಮತ್ತು ಅಡಿಕೆ ಕೃಷಿ ಇದೆ. ಸದರಿ ಕೃಷಿಗೆ ಸಂಬಂಧಿಸಿದ ಕೆಲಸಗಳಿಗೆ ನನ್ನ ಮಗ ಬೇರೆ ಕಡೆಯಿಂದ ಕೂಲಿಗಳನ್ನು ಕರೆದುಕೊಂಡು ಬಂದು ಕೆಲಸ ಮಾಡಿಸುತ್ತಾನೆ. ಹಾಗೇ ಕೆಲಸಕ್ಕೆ ಬಂದವರು ನಮ್ಮ ಮನೆಗೆ ಬಂದು ಊಟ-ತಿಂಡಿ ತಿಂದು, ಮಾತನಾಡಿ ಹೋಗುತ್ತಾನೆ

ಎಂದರೆ ಸರಿ. ಹಾಗೇ ಕೂಲಿ ಕೆಲಸಕ್ಕೆ ಬರುವವರ ಪರಿಚಯ ನನಗೆ ಇಲ್ಲ. ಸದರಿ ಕೂಲಿಗಾಗಿ ಭಾನುವಾರ ಮಾತ್ರ ಕರೆಸುತ್ತೇವೆ ಮತ್ತು ನನ್ನ ಮಗ ಅಲ್ಲೇ ಇರುತ್ತಾನೆ.

13. ಘಟನೆಯಾದ ದಿನ ಭಾನುವಾರ ಆಗಿದೆ, ಆದರೆ ಆ ದಿನ ನನ್ನ ಮಗ ಮನೆಗೆ ಬರಲಿಲ್ಲ. ನನ್ನ ಮಗ ಶಶಿಕಾಂತ ಕುಂಜತ್ತಬೈಲಿನಲ್ಲಿ ರೂಂ ಮಾಡಿಕೊಂಡು ಇದ್ದಾನೆ. ನನ್ನ ಮಗ ಕೆಲಸಕ್ಕೆ ಹೋದವನು, ಸಂಜೆ ನಮ್ಮ ಮನೆಗೆ ಬಂದು ನಂತರ ಕುಂಜತ್ತಬೈಲಿನಲ್ಲಿರುವ ಆತನ ರೂಮಿಗೆ ಹೋಗುತ್ತಾನೆ. ನಮ್ಮ ಮನೆಯಿಂದ ಪಡುಬಿದ್ರಿ ಹತ್ತಿರ ಇದೆ ಮತ್ತು ನಮ್ಮ ಮನೆಯಿಂದ ಕುಂಜತ್ತಬೈಲಿಗೆ ದೂರ ಇದೆ. ನಮ್ಮ ಮನೆಗೆ ಕೂಲಿ ಕೆಲಸಕ್ಕೆ ಬರುವವರು ನನ್ನ ಕರಿಮಣಿ ಸರವನ್ನು ಎಳೆದು, ದೋಚಿಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ.

14. ನಮ್ಮ ಮನೆಯ ಸುತ್ತಮುತ್ತ ನನ್ನ ಗಂಡನ ಸಂಬಂಧಿಕರ 3-4 ಮನೆಗಳಿವೆ ಮತ್ತು ಅವರು ನಮ್ಮ ಕಷ್ಟ-ಸುಖದಲ್ಲಿ ಭಾಗಿಯಾಗುತ್ತಾರೆ ಎಂದರೆ ಸರಿ. ನನ್ನ ಗಂಡನ ಸೋದರ ಅಳಿಯಂದಿರು ಈ ಕೇಸಿನಲ್ಲಿ ಸಾಕ್ಷಿಗಳಾಗಿದ್ದಾರೆ ಎಂದರೆ ಸರಿ. ಆ ದಿನ ಹಳೆಯಂಗಡಿಗೆ ಔಷಧಿಗಾಗಿ ನಾನು ಮತ್ತು ನನ್ನ ಗಂಡ ಒಟ್ಟಿಗೆ ಹೋಗಿದ್ದೆವು. ಸದರಿ ಘಟನೆ ನಡೆದ ಬಳಿಕ ನನ್ನ ಗಂಡ ಮನೆಗೆ ಬಂದಿರುತ್ತಾರೆ.

15. ಸದರಿ ಕೇಸಿನಲ್ಲಿ ಪೊಲೀಸರು ಸ್ಥಳಕ್ಕೆ ಬಂದಾಗ ನನ್ನ ಗಂಡ ಸಹಿ ಹಾಕಿರುವ ಬಗ್ಗೆ ನನಗೇನು ಗೊತ್ತಿಲ್ಲ. ನಮ್ಮ ಮನೆ ರಸ್ತೆ ಬದಿಗೆ ಇದೆ, ಆ ರೀತಿ ಜನ ನಮ್ಮ ಮನೆಗೆ ನೀರು ಕೇಳಿಕೊಂಡು, ಬಾಟಲಿ ಕೇಳಿಕೊಂಡು ಬರುತ್ತಾರೆ ಎಂದರೆ ಸರಿ. ಘಟನೆ ದಿನ ಬಾಟಲಿ ಕೇಳಿ ನಮ್ಮ ಮನೆಗೆ ಬಂದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿಗಳಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳಲ್ಲಿ

ನಾನು ಗುರುತು ಹಚ್ಚಿದವರು ಆ ದಿನ ನಮ್ಮ ಮನೆಗೆ ಬಂದ ವ್ಯಕ್ತಿಗಳಲ್ಲ ಎಂದರೆ ಸರಿಯಲ್ಲ. ಬಾಟಲಿಯನ್ನು ಕೇಳಿದ ವ್ಯಕ್ತಿಗಳು ತುಳು ಭಾಷೆಯಲ್ಲಿ ಮಾತನಾಡಿರುತ್ತಾರೆ. ನಮ್ಮ ಮನೆಯ ದಾರಿಯಲ್ಲಿ ಆ ದಿನ ಬೈಕಿನಲ್ಲಿ ಮತ್ತು ರಿಕ್ಷಾದಲ್ಲಿ ಹೋಗುತ್ತಿದ್ದರು, ನಡೆದುಕೊಂಡು ಯಾರೂ ಹೋಗುತ್ತಿರಲಿಲ್ಲ.

16. ಒಂದು ಸಹಿಯನ್ನು ಮನೆಯಲ್ಲಿ ಮಾಡಿರುತ್ತೇನೆ ಮತ್ತು ಉಳಿದ ಸಹಿಗಳನ್ನು ಪೊಲೀಸು ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ಘಟನೆಗೂ, ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಘಟನೆಯಿಂದ ನನಗೆ ಯಾವುದೇ ಗಾಯ ಆಗಿಲ್ಲ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎ.ಆರ್.ಎ. ವಕೀಲರಿಂದಃ**</u>

17. ನನಗೆ ಲೋ ಬಿ.ಪಿ. ಇದೆ, ಶುಗರ್ ಇಲ್ಲ. ನಾನು ಕನ್ನಡಕ ಧರಿಸಿ ಸರಿಯಾಗಿ ನೋಡಬಲ್ಲೆ, ಅದನ್ನು ತೆಗೆದಾಗ ಮಂಜು ಮಂಜಾಗಿ ಕಾಣಿಸುತ್ತದೆ. ನಾನು ಮನೆಯಲ್ಲಿ ಯಾವಾಗಲೂ ಕನ್ನಡಕ ಧರಿಸುತ್ತೇನೆ. ನನಗೆ ವಯಸ್ಸಾದ ಕಾರಣ ಕನ್ನಡಕ ಧರಿಸಿದ್ದರೂ ಸರಿಯಾಗಿ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ದೂರು ಕೊಡುವ ಕಾಲಕ್ಕೆ ಪೊಲೀಸರಿಗೆ ಸದರಿ ವ್ಯಕ್ತಿಗಳ ಮುಖ ಚಹರೆ ಮತ್ತು ಧರಿಸಿದ್ದ ಬಟ್ಟೆಯ ಬಗ್ಗೆ ಮಾಹಿತಿ ನೀಡಿದ್ದೆ. ನಾನು ಘಟನೆಯ ದಿನ ಮೂರು ಜನರನ್ನು ನೋಡಿರುತ್ತೇನೆ ಮತ್ತು ಓಡಿ ಹೋಗುವಾಗ ಒಟ್ಟು 5 ಜನರನ್ನು ನೋಡಿರುತ್ತೇನೆ. ನಾನು ದೂರು ಕೊಡುವ ಕಾಲಕ್ಕೆ ಐದು ಜನ ಮನೆಗೆ ಬಂದಿರುತ್ತಾರೆ ಎಂದು ಹೇಳಿರುವುದಿಲ್ಲ, ಆದರೆ ಒಬ್ಬ ಮಾರ್ಗದಲ್ಲಿ ನಿಂತಿದ್ದ ಎಂದು ಹೇಳಿದ್ದೆ.

18. ನಾನು ದೂರು ಕೊಡುವ ಕಾಲಕ್ಕೆ ಐದು ಜನ ವ್ಯಕ್ತಿಗಳು ಇದ್ದರು ಎಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹೇಳುವ ಮುನ್ನ ನಾನು ನ್ಯಾಯಾಲಯದ ಹೊರಗಡೆ ಕುಳಿತಿದ್ದಾಗ ನನಗೆ ಪೊಲೀಸರು ಮೊಬೈಲಿನಲ್ಲಿ ಯಾವುದೇ ವ್ಯಕ್ತಿಗಳ ಫೋಟೋ ತೋರಿಸಿರುವುದಿಲ್ಲ. ನಾನು ನ್ಯಾಯಾಲಯದ ಹೊರಗಡೆ ಕುಳಿತಿದ್ದಾಗ, ಆರೋಪಿಗಳು ಅಲ್ಲೇ ಪಕ್ಕದಲ್ಲಿ ಕುಳಿತಿದ್ದರು ಎಂದರೆ ಸರಿ. ನನಗೆ ನ್ಯಾಯಾಲಯದ ಹೊರಗೆ ಕುಳಿತಿದ್ದಾಗ ಪೊಲೀಸರು ಆರೋಪಿಗಳನ್ನು ತೋರಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.8 ಮತ್ತು ನಿ.ಪಿ.9 ಫೋಟೋಗಳು ನನಗೆ ಸಂಬಂಧಿಸಿದ ಕರಿಮಣಿಯ ಫೋಟೋಗಳಲ್ಲ ಎಂದರೆ ಸರಿಯಲ್ಲ.

19. ಮನೆಯ ಹೊರಗಡೆ ನಿಂತಿದ್ದ ಬೈಕ್ ಯಾವ ಮೋಡೆಲ್ ಬೈಕ್ ಅಂತ ನನಗೆ ಗೊತ್ತಿಲ್ಲ. ಪೊಲೀಸರು ಹೇಳಿಕೊಟ್ಟ ಹಾಗೇ ನಾನು ನ್ಯಾಯಾಲಯದಲ್ಲಿ ಆರೋಪಿಗಳ ಗುರುತು ಇದೆ ಅಂತ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ವಿ.ಆರ್.ವಿ. ವಕೀಲರಿಂದಃ**

(5 ನೇ ಆರೋಪಿ ಪರ ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ನುಡಿಯುತ್ತಾರೆ.)

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.